# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2148(2439) |
| ಮಾನ್ಯ ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 27/03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಮಿಕ ಇಲಾಖೆ ಅಡಿಯಲ್ಲಿ ನೋಂದಾವಣೆ ಆಗಿರುವ ಕಾರ್ಮಿಕ ಸಂಘಟನೆಗಳು ಎಷ್ಟು; ನಿಯಮಾನುಸಾರ ಕಾರ್ಮಿಕ ಸಂಘಟನೆಗಳು ನವೀಕರಣವನ್ನು ಹೊಂದಿವೆಯೇ; (ಹೊಂದಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು) ನೋಂದಾವಣೆ ಆಗದೆ ಇರುವ ಸಂಘಟನೆಗಳು ಎಷ್ಟು; (ಅವುಗಳ ಮಾಹಿತಿಯನ್ನು ಒದಗಿಸುವುದು) | ಕಾರ್ಮಿಕ ಇಲಾಖೆಯಲ್ಲಿ ವೃತ್ತಿ ಸಂಘಗಳ ಕಾಯ್ದೆ, 1926 ರಡಿ ನೋಂದಣಿಯಾಗಿರುವ ಕಾರ್ಮಿಕ ಸಂಘಗಳ ಒಟ್ಟು ಸಂಖ್ಯೆ: **5233.** ಆದರೆ ಸದರಿ ಕಾಯ್ದೆಯಡಿ ಕಾರ್ಮಿಕ ಸಂಘಗಳನ್ನು ನವೀಕರಣ ಮಾಡಲು ಪ್ರಾವಧಾನ ಇರುವುದಿಲ್ಲ. |
| ಆ) | ಕಾರ್ಮಿಕ ಇಲಾಖೆಯ ಅಡಿಯಲ್ಲಿ ನೋಂದಾವಣೆ ಮಾಡಿಕೊಳ್ಳಲು ಕಾರ್ಮಿಕ ಸಂಘಟನೆಗಳಿಗೆ ಇರುವ ನಿಯಮಾವಳಿಗಳು ಏನು; (ಈ ಸಂಬಂಧ ಸರ್ಕಾರದ ನಿಯಮ ಮತ್ತು ಸುತ್ತೋಲೆ ಗಳ ಪ್ರತಿಯನ್ನು ಒದಗಿಸುವುದು) | ಕಾರ್ಮಿಕ ಇಲಾಖೆಯ ಅಡಿಯಲ್ಲಿ ಕಾರ್ಮಿಕ ಸಂಘಗಳನ್ನು ವೃತ್ತಿ ಸಂಘಗಳ ಕಾಯ್ದೆ, 1926 ರ ಪ್ರಾವಧಾನಗಳನ್ವಯ ನೋಂದಣಿ ಮಾಡಿಕೊಳ್ಳಲಾಗುತ್ತಿದ್ದು, ಈ ಸಂಬಂಧ ಸರ್ಕಾರದಿಂದ ಯಾವುದೇ ನಿಯಮ/ಸುತ್ತೋಲೆ ಹೊರಡಿಸಿರುವುದಿಲ್ಲ. |
| ಇ) | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ ಅಡಿಯಲ್ಲಿ ನೋಂದಾವಣೆ ಆಗಿರುವ ಕಾರ್ಮಿಕ ಸಂಘಟನೆಗಳು ಎಷ್ಟು; (ಇವುಗಳ ಪೂರ್ಣ ವಿವರಗಳನ್ನು ಒದಗಿ ಸುವುದು) | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆಯಡಿಯಲ್ಲಿ ಕಾರ್ಮಿಕ ಸಂಘಗಳ ನೋಂದಣಿಗೆ ಅವಕಾಶವಿರುವುದಿಲ್ಲ. |
| ಈ) | ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸಂಘಟನೆಗಳಿಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಯೋಜನೆಯ ಅಡಿಯಲ್ಲಿ ಕಾರ್ಮಿಕರ ಕಿಟ್‌ಗಳನ್ನು ಯೋಜನೆಗಳ ಪ್ರಯೋಜನಗಳನ್ನು, ಸೌಲಭ್ಯಗಳನ್ನು, ಅನುದಾನ ಗಳನ್ನು ಮತ್ತು ಸಹಾಯಧನವನ್ನು ನೀಡ ಲಾಗಿದೆ; (ಅವುಗಳ ಪೂರ್ಣ ವಿವರ ಗಳನ್ನು ಒದಗಿಸುವುದು) | ಮಂಡಳಿಯಿಂದ ಕಾರ್ಮಿಕ ಸಂಘಟನೆಗಳಿಗೆ ಯಾವುದೇ ರೀತಿಯ ಕಿಟ್‌ಗಳನ್ನು, ಯೋಜನೆಗಳ ಪ್ರಯೋಜನಗಳನ್ನು, ಸೌಲಭ್ಯಗಳನ್ನು, ಅನುದಾನ ಗಳನ್ನು ಮತ್ತು ಸಹಾಯಧನವನ್ನು ನೇರವಾಗಿ ನೀಡಲಾಗುತ್ತಿಲ್ಲ. |

| | | |
|---|---|---|
| ಉ) | ಕಾರ್ಮಿಕ ಇಲಾಖೆಯ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮತ್ತು ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆ ಆಗಿದೆಯೇ? (ಆಗಿದ್ದಲ್ಲಿ, ಮಂಡಳಿಯ ವಿವರಗಳನ್ನು ನೀಡುವುದು) | ಹೌದು, ಕಾರ್ಮಿಕ ಇಲಾಖೆಯ ಅಧೀನದಲ್ಲಿ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮತ್ತು ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗಳು ರಚನೆಯಾಗಿದ್ದು, ಸದರಿ ಮಂಡಳಿಗಳ ವಿವರ ಈ ಕೆಳಕಂಡಂತಿರುತ್ತದೆ.<br><br>ದೇಶದ ದುಡಿಯುವ ವರ್ಗದಲ್ಲಿ ಶೇ.83ಕ್ಕಿಂತ ಹೆಚ್ಚು ಕಾರ್ಮಿಕರು ಅಸಂಘಟಿತ ವಲಯದಲ್ಲಿ ಇರುವುದಾಗಿ ಅಂದಾಜಿಸಿದ್ದು, ಇವರ ಜೀವನ ಮಟ್ಟವನ್ನು ಉತ್ತಮಪಡಿಸಿ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯನ್ನು, 2008 ರಲ್ಲಿ ಜಾರಿಗೆ ತಂದಿರುತ್ತದೆ. ಇದಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮಗಳು, 2009ಅನ್ನು ರಚಿಸಿರುತ್ತದೆ. ಅಲ್ಲದೆ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯನ್ನು, 2008ರ ಕಲಂ 6(1) ರನ್ವಯ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಲಾಗಿರುತ್ತದೆ<br><br>ಕರ್ನಾಟಕ ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ದಿನಾಂಕ: 01-08-2024ರಂದು ಸರ್ಕಾರವು ಅಧಿಸೂಚನೆ ಹೊರಡಿಸುವ ಮೂಲಕ ಪುನರ್ ರಚನೆಯಾಗಿರುತ್ತದೆ. |

**ಕಾಇ 163 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2148(2439) |
| ಮಾನ್ಯ ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 27/03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಮಿಕ ಇಲಾಖೆ ಅಡಿಯಲ್ಲಿ ನೋಂದಾವಣೆ ಆಗಿರುವ ಕಾರ್ಮಿಕ ಸಂಘಟನೆಗಳು ಎಷ್ಟು; ನಿಯಮಾನುಸಾರ ಕಾರ್ಮಿಕ ಸಂಘಟನೆಗಳು ನವೀಕರಣವನ್ನು ಹೊಂದಿವೆಯೇ; (ಹೊಂದಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು) ನೋಂದಾವಣೆ ಆಗದೆ ಇರುವ ಸಂಘಟನೆಗಳು ಎಷ್ಟು; (ಅವುಗಳ ಮಾಹಿತಿಯನ್ನು ಒದಗಿಸುವುದು) | ಕಾರ್ಮಿಕ ಇಲಾಖೆಯಲ್ಲಿ ವೃತ್ತಿ ಸಂಘಗಳ ಕಾಯ್ದೆ, 1926 ರಡಿ ನೋಂದಣಿಯಾಗಿರುವ ಕಾರ್ಮಿಕ ಸಂಘಗಳ ಒಟ್ಟು ಸಂಖ್ಯೆ: **5233.** ಆದರೆ ಸದರಿ ಕಾಯ್ದೆಯಡಿ ಕಾರ್ಮಿಕ ಸಂಘಗಳನ್ನು ನವೀಕರಣ ಮಾಡಲು ಪ್ರಾವಧಾನ ಇರುವುದಿಲ್ಲ. |
| ಆ) | ಕಾರ್ಮಿಕ ಇಲಾಖೆಯ ಅಡಿಯಲ್ಲಿ ನೋಂದಾವಣೆ ಮಾಡಿಕೊಳ್ಳಲು ಕಾರ್ಮಿಕ ಸಂಘಟನೆಗಳಿಗೆ ಇರುವ ನಿಯಮಾವಳಿಗಳು ಏನು; (ಈ ಸಂಬಂಧ ಸರ್ಕಾರದ ನಿಯಮ ಮತ್ತು ಸುತ್ತೋಲೆ ಗಳ ಪ್ರತಿಯನ್ನು ಒದಗಿಸುವುದು) | ಕಾರ್ಮಿಕ ಇಲಾಖೆಯ ಅಡಿಯಲ್ಲಿ ಕಾರ್ಮಿಕ ಸಂಘಗಳನ್ನು ವೃತ್ತಿ ಸಂಘಗಳ ಕಾಯ್ದೆ, 1926 ರ ಪ್ರಾವಧಾನಗಳನ್ವಯ ನೋಂದಣಿ ಮಾಡಿಕೊಳ್ಳಲಾಗುತ್ತಿದ್ದು, ಈ ಸಂಬಂಧ ಸರ್ಕಾರದಿಂದ ಯಾವುದೇ ನಿಯಮ/ಸುತ್ತೋಲೆ ಹೊರಡಿಸಿರುವುದಿಲ್ಲ. |
| ಇ) | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆ ಅಡಿಯಲ್ಲಿ ನೋಂದಾವಣೆ ಆಗಿರುವ ಕಾರ್ಮಿಕ ಸಂಘಟನೆಗಳು ಎಷ್ಟು; (ಇವುಗಳ ಪೂರ್ಣ ವಿವರಗಳನ್ನು ಒದಗಿ ಸುವುದು) | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಾಯ್ದೆಯಡಿಯಲ್ಲಿ ಕಾರ್ಮಿಕ ಸಂಘಗಳ ನೋಂದಣಿಗೆ ಅವಕಾಶವಿರುವುದಿಲ್ಲ. |
| ಈ) | ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸಂಘಟನೆಗಳಿಗೆ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಯೋಜನೆಯ ಅಡಿಯಲ್ಲಿ ಕಾರ್ಮಿಕರ ಕಿಟ್‌ಗಳನ್ನು ಯೋಜನೆಗಳ ಪ್ರಯೋಜನಗಳನ್ನು, ಸೌಲಭ್ಯಗಳನ್ನು, ಅನುದಾನ ಗಳನ್ನು ಮತ್ತು ಸಹಾಯಧನವನ್ನು ನೀಡ ಲಾಗಿದೆ; (ಅವುಗಳ ಪೂರ್ಣ ವಿವರ ಗಳನ್ನು ಒದಗಿಸುವುದು) | ಮಂಡಳಿಯಿಂದ ಕಾರ್ಮಿಕ ಸಂಘಟನೆಗಳಿಗೆ ಯಾವುದೇ ರೀತಿಯ ಕಿಟ್‌ಗಳನ್ನು, ಯೋಜನೆಗಳ ಪ್ರಯೋಜನಗಳನ್ನು, ಸೌಲಭ್ಯಗಳನ್ನು, ಅನುದಾನ ಗಳನ್ನು ಮತ್ತು ಸಹಾಯಧನವನ್ನು ನೇರವಾಗಿ ನೀಡಲಾಗುತ್ತಿಲ್ಲ. |

| | | |
|---|---|---|
| ಉ) | ಕಾರ್ಮಿಕ ಇಲಾಖೆಯ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮತ್ತು ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ರಚನೆ ಆಗಿದೆಯೇ? (ಆಗಿದ್ದಲ್ಲಿ ಮಂಡಳಿಯ ವಿವರಗಳನ್ನು ನೀಡು ವುದು) | ಹೌದು, ಕಾರ್ಮಿಕ ಇಲಾಖೆಯ ಅಧೀನದಲ್ಲಿ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮತ್ತು ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗಳು ರಚನೆಯಾಗಿದ್ದು, ಸದರಿ ಮಂಡಳಿಗಳ ವಿವರ ಈ ಕೆಳಕಂಡಂತಿರುತ್ತದೆ.<br><br>ದೇಶದ ದುಡಿಯುವ ವರ್ಗದಲ್ಲಿ ಶೇ.83ಕ್ಕಿಂತ ಹೆಚ್ಚು ಕಾರ್ಮಿಕರು ಅಸಂಘಟಿತ ವಲಯದಲ್ಲಿ ಇರುವುದಾಗಿ ಅಂದಾಜಿಸಿದ್ದು, ಇವರ ಜೀವನ ಮಟ್ಟವನ್ನು ಉತ್ತಮಪಡಿಸಿ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯನ್ನು, 2008 ರಲ್ಲಿ ಜಾರಿಗೆ ತಂದಿರುತ್ತದೆ. ಇದಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯವು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮಗಳು, 2009ಅನ್ನು ರಚಿಸಿರುತ್ತದೆ. ಅಲ್ಲದೆ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯನ್ನು, 2008ರ ಕಲಂ 6(1) ರನ್ವಯ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ರಚಿಸಲಾಗಿರುತ್ತದೆ<br><br>ಕರ್ನಾಟಕ ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ದಿನಾಂಕ: 01-08-2024ರಂದು ಸರ್ಕಾರವು ಅಧಿಸೂಚನೆ ಹೊರಡಿಸುವ ಮೂಲಕ ಪುನರ್ ರಚನೆಯಾಗಿರುತ್ತದೆ. |

**ಕಾಇ 163 ಎಲ್ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**